**ಸಾಕ್ಷಿಯನ್ನು ಪುನಃ ದಿಃ 02-04-2018 ರಂದು ಕರೆಸಿ ಪ್ರಮಾಣೀಕರಿಸಲಾಯಿತು**

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ. ಎಸ್‌ಎಸ್ ವಕೀಲರಿಂದಃ**

ನನ್ನ ಸ್ವಂತ ಊರು ನೀಲಟೂರು ಗ್ರಾಮ. ನಾವು 3 ಜನ ಅಣ್ಣ ತಮ್ಮಂದಿರು, ಸಿ. ವೆಂಕಟರಾಮೇಗೌಡ, ಸಿ. ವೆಂಕಟೇಶಗೌಡ ಮತ್ತು ನಾನು. ನಾನು 3ನೇಯವನು. ನನ್ನ ದೊಡ್ಡಣ್ಣ ಊರಿನಲ್ಲಿ ವ್ಯವಸಾಯ ಮಾಡುತ್ತಾರೆ, 2ನೇಯವರು ಅರಣ್ಯ ಇಲಾಖೆಯಲ್ಲಿ ನಿವೃತ್ತರಾಗಿದ್ದಾರೆ. ಅವರು ಶ್ರೀನಿವಾಸಪುರದಲ್ಲಿ ಇದ್ದಾರೆ. 2010 ರಲ್ಲಿ ನನ್ನ ಎರಡನೆಯ ಅಣ್ಣ ಬೆಂಗಳೂರಿನಲ್ಲಿ ಮತ್ತು ಶ್ರೀನಿವಾಸಪುರದಲ್ಲಿ ಎರಡೂ ಕಡೆಯಲ್ಲಿ ಇದ್ದರು. ಅವರು ಸಂಸಾರ ಕೆಆರ್.ಪುರಂನದಲ್ಲಿದ್ದರು. 2010 ರಲ್ಲಿ ಎಲ್ಲಿ ವಾಸ ಇದ್ದರು ಎಂದು ಸರಿಯಾಗಿ ಗೊತ್ತಿಲ್ಲ. 2010 ರಲ್ಲಿ ಅವರು ಎಲ್ಲಿ ಕೆಲಸ ಮಾಡುತ್ತಿದ್ದರು ಎಂದು ಗೊತ್ತಿಲ್ಲ. ನನ್ನ ದೊಡ್ಡ ಅಣ್ಣನಿಗೆ ಒಬ್ಬಳೇ ಮಗಳು, ಎರಡನೆಯ ಅಣ್ಣನಿಗೆ ಸಹ ಒಬ್ಬಳೇ ಮಗಳು.

ನನ್ನ ಮಗಳ ಮದುವೆಯಾಗುವ ಮೊದಲು ಅವರಿಬ್ಬರ ಮದುವೆಯಾಗಿತ್ತು. ನನ್ನ ದೊಡ್ಡಣ್ಣನ ಮಗಳ ಹೆಸರು ಮಣಿಯಮ್ಮ ಮತ್ತು ಅವಳನ್ನು ನಮ್ಮ ಬಾಮೈದುನನಿಗೆ ಕೊಟ್ಟಿದ್ದೇವೆ. ಎರಡನೆಯ ಅಣ್ಣನ ಮಗಳನ್ನು ನನ್ನ ಸೋದರ ಮಾವನ ಮಗನಿಗೆ ಸೀಸಂದ್ರಕ್ಕೆ ಕೊಟ್ಟಿದ್ದೇವೆ. 2010 ರಲ್ಲಿ ನಾನು ಮತ್ತು ನನ್ನ ಅಣ್ಣಂದಿರು ಬೇರೆ ಬೇರೆ ವಾಸ ಇದ್ದೆವು. ಆಸ್ತಿಯನ್ನು ಭಾಗ ಮಾಡಿಕೊಂಡಿದ್ದೆವು. 2010 ರಲ್ಲಿ ನನ್ನ ಮತ್ತು ಸಹೋದರರ ನಡುವೆ ಜಮೀನಿನ ಬಗ್ಗೆ ವಿವಾದ ಇತ್ತು. ನನ್ನ ದೊಡ್ಡಣ್ಣ ಮತ್ತು 2ನೇ ಅಣ್ಣನ ಮಗಳ ಮದುವೆ ಯಾವ ಇಸ್ವಿಯಲ್ಲಿ ಆಯಿತು ಎಂದು ನೆನಪಿಲ್ಲ. ಆ ಮದುವೆಗಳಲ್ಲಿ ನಾನು ಮತ್ತು ನನ್ನ ಸಹೋದರರು ಹೊಂದಾಣಿಕೆಯಲ್ಲಿದ್ದೆವು. ಆ ಎರಡೂ ಮದುವೆ ಕಾರ್ಯಕ್ರಮಕ್ಕೆ ನಾನು ಮತ್ತು ನನ್ನ ಕುಟುಂಬದವರು ಭಾಗವಹಿಸಿದ್ದೆವು. ಅವರಿಬ್ಬರ ಮದುಗೆ ಹಿಂದೂ ಸಂಪ್ರದಾಯದ ಪ್ರಕಾರ ಮಾಡಿದ್ದೇವೆ. ನನ್ನ ಅಣ್ಣಂದಿರು ಅವರ ಹೆಣ್ಣು ಮಕ್ಕಳ ಮದುವೆಯನ್ನು ಸ್ವಂತ ಖರ್ಚು ಇಟ್ಟು ಮಾಡಿದ್ದರು ಎಂದರೆ ನೆನಪಿಲ್ಲ.

ನಾನೂ ಸಹ ನನ್ನ ಮಗಳ ಮದುವೆಯನ್ನು ನಮ್ಮ ಸಂಪ್ರದಾಯದ ಪ್ರಕಾರ ಮಾಡಿಕೊಟ್ಟಿದ್ದೇನೆ. ಆ ಎರಡೂ ಹೆಣ್ಣು ಮಕ್ಕಳು ಮದುವೆಯನ್ನು ಯಾವ ಊರಿನಲ್ಲಿ ಮಾಡಿದ್ದು ಎಂದು ನೆನಪಿಲ್ಲ. ಆ ಇಬ್ಬರು ಹೆಣ್ಣು ಮಕ್ಕಳ ಮದುವೆಯನ್ನು ಎಲ್ಲಿ ಮಾಡಿದ್ದರು ಎಂದು ನನಗೆ ನೆನಪಿಲ್ಲ. ನನ್ನ ಹೆಂಡತಿಯ ತವರು ಮನೆ ನಮ್ಮ ಊರು. ನಮ್ಮ ಮಾವನಿಗೆ ಇಬ್ಬರು ಹೆಣ್ಣು ಮಕ್ಕಳು. ದೊಡ್ಡ ಮಗಳನ್ನು ಪ್ರಾಸಾ 4 ವೆಂಕಟೇಶ್ ರವರಿಗೆ ಕೊಟ್ಟಿದ್ದಾರೆ. ವೆಂಕಟೇಶ್ ರವರ ಮದುವೆ ಯಾವ ವರ್ಷದಲ್ಲಿ ಆಯಿತು ಎಂದು ನೆನಪಿಲ್ಲ. ಆ ಮದುವೆಯನ್ನು ನನ್ನ ಮಾವನೇ ಮುಂದಾಳತ್ವವನ್ನು ವಹಿಸಿ ಮಾಡಿಕೊಟ್ಟರು ಎಂದರೆ ಸರಿ. ಅದೇ ರೀತಿ ನನ್ನ ಮದುವೆಯನ್ನು ಸಹ ನನ್ನ ಮಾವ ಮುಂದಾಳತ್ವವನ್ನು ವಹಿಸಿ ಮಾಡಿಕೊಟ್ಟರು. ನನ್ನ ಮಾವ ವ್ಯವಸಾಯ ಮಾಡುತ್ತಿದ್ದರು.

ನನ್ನ ಮಾವ ಸಂಪ್ರದಾಯವಾಗಿ ಹೆಣ್ಣು ಮಕ್ಕಳಿಗೆ ಮತ್ತು ಅಳಿಯಂದಿರಿಗೆ ಕೊಡಬೇಕಾಗಿದ್ದನ್ನು ಕೊಟ್ಟು ಮದುವೆ ಮಾಡಿದ್ದಾರೆಂದರೆ ಸರಿ. ಅದೇ ರೀತಿ ನಾನೂ ಸಹ ಸಂಪ್ರದಾಯದ ಪ್ರಕಾರ ನನ್ನ ಮಗಳು ಮತ್ತು ಅಳಿಯನಿಗೆ ಏನೇನು ಕೊಡಬೇಕೋ ಅದನ್ನು ಕೊಟ್ಟು ಮದುವೆ ಮಾಡಿಕೊಟ್ಟೆ ಎಂದರೆ ಸರಿ. ನಾನು ಎಂಎ ಬಿಎಡ್ ಮಾಡಿದ್ದೇನೆ. ನಾನು ಪಿಯುಸಿಯನ್ನು ವಿವಿಪುರಂ ಕಾಲೇಜಿನಲ್ಲಿ ಓದಿದ್ದೆ. ಯಾವ ವರ್ಷದಲ್ಲಿ ಎಂದು ನೆನಪಿಲ್ಲ. ಪಿಯುಸಿ ಪಾಸಾಗಿಲ್ಲ. 10 ನೇ ತರಗತಿ ಯಲ್ಲೂರಿನಲ್ಲಿ ಓದಿದ್ದೇನೆ. ನಮ್ಮ ಊರಿಗೂ ಯಲ್ಲೂರಿಗೂ 3 ಮೈಲಿ ಅಂತರ ಇದೆ. ನಾನು 1972-73 ರಲ್ಲಿ 10 ನೇ ತರಗತಿ ಓದುತ್ತಿದ್ದೆ. ನಾನು 1978 ರಲ್ಲಿ ಕೆಲಸಕ್ಕೆ ಸೇರಿದೆ. ನಾನು 10ನೇ ತರಗತಿ ಆದ ನಂತರ ಡಿಪ್ಲೊಮೋ ಇನ್ ಕ್ರಾಫ್ಟ್‌ಅನ್ನು 2 ವರ್ಷಗಳ ಕಾಲ ಲಾಲ್‌ಬಾಗ್‌ನಲ್ಲಿ ಓದಿದ್ದೇನೆ. ಅದರ ಆಧಾರದ ಮೇಲೆ ನನಗೆ ಕೆಲಸ ಸಿಕ್ಕಿತು. ಮೊದಲು ನನಗೆ ತಿರುವಿಹಾಳ ಸಿಂಗನೂರು ತಾಲ್ಲೂಕಿನಲ್ಲಿ ಕೆಲಸ ಕೊಟ್ಟರು. ಆಗ ನನಗೆ ಬೇಸಿಕ್ 341 ರೂ ಎಂದರೆ ಸರಿಯಲ್ಲ. ಇಲಾಖೆಯಿಂದ 500 ರೂ ಬೇಸಿಕ್ ಎಂದು ಆದೇಶ ನಂತರದಲ್ಲಿ ಕೊಟ್ಟರು. ನನ್ನ ಸರ್ವೀಸ್ ರಿಜಿಸ್ಟರ್‌ನಲ್ಲಿ ನಾನು ಕೆಲಸಕ್ಕೆ ಸೇರಿದ ದಿನಾಂಕ ಮತ್ತು ಸಂಬಳ ಇತ್ಯಾದಿ ಎಲ್ಲಾ ಮಾಹಿತಿಗಳನ್ನು ಬರೆದಿರುತ್ತಾರೆಂದರೆ ಸರಿ. ನಮ್ಮ ಗಮನಕ್ಕೆ ತಂದು ನಂತರ ಮಾಹಿತಿಯನ್ನು ನಮೂದು ಮಾಡುತ್ತಾರೆ ಎಂದರೆ ಸರಿ.

ನಾನು ಜನ್ಮ ದಿನಾಂಕದ ಪ್ರಕಾರ ಫೆಬ್ರವರಿ 2015 ಕ್ಕೆ ನಿವೃತ್ತಿ ಹೊಂದಬೇಕಾಗಿದ್ದು, ನಂತರ ನನ್ನ ಜನ್ಮ ದಿನಾಂಕ ತಿದ್ದುಪಡಿಯಾದ ನಂತರ 2017 ಕ್ಕೆ ನಿವೃತ್ತಿ ಹೊಂದಿದೆ. ನಾನು ಅಲ್ಲಿಂದ ಲಕ್ಕೂರಿಗೆ ವರ್ಗಾವಣೆ ಆದೆ. ಲಕ್ಕೂರಿನಲ್ಲಿ 8 ವರ್ಷ ಕೆಲಸ ಮಾಡಿದ್ದೇನೆ. 1983 ರಲ್ಲಿ ನನ್ನ ಮದುವೆಯಾಗಿದ್ದು, ನನ್ನ ಕುಟುಂಬ ಲಕ್ಕೂರಿನಲ್ಲಿ ನನ್ನ ಜೊತೆ ಇದ್ದರು. 1985 ರಲ್ಲಿ ನಂಬಿಹಳ್ಳಿ ಸರ್ಕಾರಿ ಪ್ರೌಢಶಾಲೆಗೆ ವರ್ಗಾವಣೆಯಾಯಿತು. ನನ್ನ ಜೊತೆ ಚಾಸಾ 31 ಪುಷ್ಪಮ್ಮ ರವರ ಗಂಡ ನಾರಾಯಣಸ್ವಾಮಿ ಸಹ ನನ್ನ ಜೊತೆ ಶಿಕ್ಷಕರಾಗಿದ್ದರು. ನಂಬಿಹಳ್ಳಿಗೂ-ಶ್ರೀನಿವಾಸಪುರಕ್ಕೂ 5-6 ಕಿಮೀ ಅಂತರ ಇದೆ. ನನ್ನ ಕುಟುಂಬ ಶ್ರೀನಿವಾಸಪುರದಲ್ಲಿತ್ತು, ನಾನು ಶ್ರೀನಿವಾಸಪುರದಿಂದ ನಂಬಿಹಳ್ಳಿಗೆ ಬಸ್ಸಿನಲ್ಲಿ ಕೆಲವೊಮ್ಮೆ ಬೇರೆ ವಾಹನಗಳಲ್ಲೂ ಹೋಗುತ್ತಿದ್ದೆ. ಆ ಸಮಯದಲ್ಲಿ ನನಗೆ ಸ್ವಂತ ವಾಹನ ಇರಲಿಲ್ಲ. ನಾರಾಯಣಸ್ವಾಮಿ ಸಹ ಶ್ರೀನಿವಾಸಪುರದಲ್ಲಿದ್ದರು. ನನ್ನ ಶಾಲಾ ಕರ್ತವ್ಯದ ಅವಧಿ ಬೆಳಿಗ್ಗೆ 10.30 ರಿಂದ ಸಂಜೆ 4.30 ರವರೆಗೆ ಇತ್ತು, ಅಲ್ಲಿ ಆರ್. ವೆಂಕಟೇಶ್ ಮುಖ್ಯೋಪಾಧ್ಯಾಯರಾಗಿದ್ದರು. ಅಲ್ಲಿ ನಾನು ದಿನಚರಿ ಹಾಕುತ್ತಿದ್ದೆ. ನಾನು 20-21 ವರ್ಷಗಳ ಕಾಲ ನಂಬಿಹಳ್ಳಿಯಲ್ಲಿ ಕೆಲಸ ಮಾಡಿದ್ದೇನೆ. ನನ್ನ ಮಗ ಚಾಸಾ 7 ದೊಡ್ಡವನು. ಅವನು ಲಕ್ಕೂರಿನಲ್ಲಿ ಹುಟ್ಟಿದ್ದು, ಮಗಳು ಶ್ರೀನಿವಾಸಪುರದಲ್ಲಿ ಹುಟ್ಟಿದ್ದು. ನನ್ನ ಮಗಳು ಶ್ರೀನಿವಾಸಪುರ ಸರ್ಕಾರಿ ಆಸ್ಪತ್ರೆಯಲ್ಲಿ 1989ನೇ ಇಸ್ವಿಯಲ್ಲಿ ಹುಟ್ಟಿದಳು.

ನನ್ನ ಮಗಳನ್ನು ಖಾಸಗೀ ಶಾಲೆಯಲ್ಲಿ 8-9ನೇ ತರಗತಿ ಓದಿಸಿದ್ದೆ. ಬೈರವೇಶ್ವರ ಶಾಲೆಗೆ ಸೇರಿಸಿದ ವರ್ಷ ನೆನಪಿಲ್ಲ. ಆಕೆ 1ನೇ ಪಿಯುಸಿ ವರೆಗೆ ಶ್ರೀನಿವಾಸಪುರ ಸರ್ಕಾರಿ ಜ್ಯೂನಿಯರ್ ಕಾಲೇಜಿನಲ್ಲಿ ಓದಿದಳು. 2ನೇ ವರ್ಷದ ಪಿಯುಸಿಗೆ ದೊಡ್ಡಬಳ್ಳಾಪುರದ ಪೊಂಗಾಡಿಯಪ್ಪ ಶಾಲೆಗೆ ಸೇರಿಸಿದ್ದೆ. ಆಕೆ ದೊಡ್ಡ ಬಳ್ಳಾಪುರದಲ್ಲಿ ವಾಸ ಇದ್ದಳು. ನನ್ನ ಮಗಳು 2ನೇ ಪಿಯುಸಿಗೆ ಸೇರಿಸಿದಾಗ ನಮ್ಮ ಕುಟುಂಬವನ್ನು ದೊಡ್ಡ ಬಳ್ಳಾಪುರದ ಶಾಂತಿ ನಗರಕ್ಕೆ ಶಿಫ್ಟ್ ಮಾಡಿದ್ದೆವು. ಆ ಸಮಯದಲ್ಲಿ ನಾನು ನಂಬಿಹಳ್ಳಿಯಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ.

ಯಾವ ವರ್ಷ ನನ್ನ ಮಗಳು ದ್ವಿತೀಯ ಪಿಯುಸಿ ಓದುತ್ತಿದ್ದಳು ಎಂದು ನೆನಪಿಲ್ಲ. 2003 ರಲ್ಲಿ ನನ್ನ ಮಗಳು ಪ್ರಥಮ ಪಿಯುಸಿ ಓದುತ್ತಿದ್ದಿರಬಹುದು. ನಾನು ದೊಡ್ಡ ಬಳ್ಳಾಪುರದಿಂದ ಡಿಡಿಪಿಐ ಕಚೇರಿಗೆ ಬೆಂಗಳೂರಿಗೆ ಹೋಗುತ್ತಿದ್ದೆ. ನನಗೆ ಆ ಕಚೇರಿಯಲ್ಲಿ ಟೀಚಿಂಗ್ ಕೆಲಸ ಇರಲಿಲ್ಲ. ನನಗೆ ಆಕೆ ಕಾಲೇಜಿಗೆ ಎಷ್ಟು ಗಂಟೆಗೆ ಹೋಗಿ ಬರುತ್ತಿದ್ದಳು ಎಂಬ ಬಗ್ಗೆ ಸರಿಯಾಗಿ ಗೊತ್ತಿಲ್ಲ. ನನ್ನ ಮಗಳು 2ನೇಯ ವರ್ಷದ ಪಿಯುಸಿಯನ್ನು ಯಾವಾಗ ಮುಗಿಸಿದ್ದಳು ಎಂದು ನೆನಪಿಲ್ಲ. ನನ್ನ ಮಗಳು ಎರಡು ಅಟೆಂಮ್ಪ್ಟ್‌ನಲ್ಲಿ 2ನೆಯ ಪಿಯುಸಿ ಮುಗಿಸಿದ್ದಳು. ನನ್ನ ಮಗಳು ಎಷ್ಟು ವರ್ಷ ಕಾಲ ಪಿಯುಸಿ ಮುಗಿಸಿದಳು ಎಂದು ಗೊತ್ತಿಲ್ಲ. ಶ್ರೀನಿವಾಸಪುರದ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ರವರು ಕಾಲೇಜು ಬದಲಾವಣೆ ಮಾಡುವುದು ಬೇಡ ಎಂದು ಹೇಳಿದರು. ಪ್ರಿನ್ಸಿಪಾಲ್ ರವರು ಹೇಳಿದ್ದರೂ ಸಹ ಅನಿವಾರ್ಯ ಕಾರಣಗಳಿಂದ ನಾನು ಬದಲಾವಣೆ ಮಾಡಿದ್ದೆ. ನನ್ನ ಮಗ ಆರ್. ಎಲ್ ಜಾಲಪ್ಪ ಕಾಲೇಜು ದೊಡ್ಡ ಬಳ್ಳಾಪುರದಲ್ಲಿ ಬಿಇ ಮಾಡುತ್ತಿದ್ದ.

ನನ್ನ ಮಗಳು ದ್ವಿತೀಯ ಪಿಯುಸಿ ಮುಗಿಸಲು 2 ವರ್ಷ ತೆಗೆದುಕೊಂಡಳು ಎಂದರೆ ಸರಿಯಲ್ಲ. ನನ್ನ ಮಗಳು ಮೌಂಟ್‌ಕಾರ್ಮಲ್ ಕಾಲೇಜಿನಲ್ಲಿ ಬಿಎಸ್‌ಸಿ 3 ವರ್ಷ ಅಂದರೆ 6 ಸೆಮಿಸ್ಟಾರ್ ಓದಿದಳು. ಆಕೆ ಪಿಸಿಎಂಸಿ ತೆಗೆದುಕೊಂಡಿದ್ದಳು. ಆಕೆ ಬಿಎಸ್‌ಸಿ ಪಾಸ್ ಮಾಡಲಿಲ್ಲ. ನನ್ನ ಮಗಳಿಗೆ ಓದಲು ತುಂಬಾ ಆಸಕ್ತಿ ಇತ್ತು. ಆಕೆಗೆ ಮದುವೆಗಿಂತ ಓದಿನಲ್ಲಿ ಹೆಚ್ಚು ಆಸಕ್ತಿ ಇತ್ತು ಎಂದರೆ ಹಾಗೇನೂ ಇಲ್ಲ. ನಮ್ಮ ಮಾತನ್ನು ಆಕೆ ಕೇಳುತ್ತಿದ್ದಳು. ನಮಗೆ ಆಕೆಯನ್ನು ಹೆಚ್ಚು ಓದಿಸಬೇಕೆಂಬ ಆಸಕ್ತಿ ಇತ್ತು. ಓದಿಸಲು ನನಗೇನೂ ತೊಂದರೆ ಇರಲಿಲ್ಲ. ನನ್ನ ಮಗಳು ಪಿಯುಸಿ ಮುಗಿಸುವವರೆಗೆ ನಮ್ಮ ಸಂಸಾರ ದೊಡ್ಡ ಬಳ್ಳಾಪುರದಲ್ಲಿ ಇತ್ತು. ನಾನು ದೊಡ್ಡ ಬಳ್ಳಾಪುರದಿಂದ ಬೆಂಗಳೂರಿಗೆ ಪ್ರತಿದಿನ ಕೆಲಸಕ್ಕೆ ಹೋಗಿ ಬರುತ್ತಿದ್ದೆ. ನಮ್ಮ ಕಚೇರಿ ಮತ್ತು ಮನೆಗೆ 45 ಕಿಮೀ ಅಂತರ ಇತ್ತು. ಯಾವ ವರ್ಷದಲ್ಲಿ ನನ್ನ ಮಗ ಬಿಇ ಮುಗಿಸಿದ ಎಂದು ನೆನಪಿಲ್ಲ. ನಾವು ದೊಡ್ಡಬಳ್ಳಾಪುರದಲ್ಲಿರುವಾಗ ನನ್ನ ಮಗ ಕೆಲಸಕ್ಕೆ ಸೇರಿರಲಿಲ್ಲ.

ಪ್ರಾಸಾ 6 ವಿನಯ್ ತಂಗಿಯನ್ನು ನನ್ನ ಮಗ ಮದುವೆ ಮಾಡಿಕೊಂಡ. ನಾನು ಮತ್ತು ಪ್ರಾಸಾ 4 ವೆಂಕಟೇಶ್ ಅಕ್ಕ ತಂಗಿಯರನ್ನು ಮದುವೆಯಾಗಿದ್ದೇವೆ. ಚಾಸಾ 4 ಚಂದ್ರಶೇಖರ್ ವೆಂಕಟೇಶ್ ರವರ ಮಗಳನ್ನು ಮದುವೆಯೂಗಿದ್ದಾರೆ. ವೆಂಕಟೇಶ್ ರವರಿಗೆ 4 ಜನ ಹೆಣ್ಣು ಮಕ್ಕಳು. ಸಿಪಿಐ ಜಗದೀಶ್ ರವರು ವೆಂಕಟೇಶ್ ರವರ 3ನೇಯ ಮಗಳನ್ನು ಮದುವೆಯಾಗಿದ್ದಾರೆ. 2010 ರಲ್ಲಿ ಸದರಿ ಜಗಧೀಶ್ ರವರು ಕೆಜಿಫ್‌ನಲ್ಲಿ ಪಿಎಸ್ಐ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಆಗ ಜಗದೀಶ್ ರವರ ಕುಟುಂಬ ಬೇತಮಂಗಲದಲ್ಲಿ ಇದ್ದರು. ಜಗದೀಶ್ ರವರು ಬೇತಮಂಗಲದಲ್ಲಿ ಪಿಎಸ್ಐ ಆಗಿದ್ದರು. ಕೋಲಾರದಿಂದ ಬೇತಮಂಗಲ 23 ಕಿಮೀ ಎಂದರೆ ಸರಿ. ದ್ವಿಚಕ್ರ ವಾಹನದಲ್ಲಿ ಅರ್ಧ ಗಂಟೆಗೆ ಬರಬಹುದು ಎಂದರೆ ಸರಿ. ವೆಂಕಟೇಶ್ ರವರ ಎರಡನೆಯ ಮಗಳನ್ನು ಬೆಂಗಳೂರಿನವರಿಗೆ ಕೊಟ್ಟಿದ್ದಾರೆ. 4ನೆಯ ಮಗಳನ್ನು ಬೆಂಗಳೂರಿನ ಇಂಜಿನಿಯರ್‌ಗೆ ಕೊಟ್ಟಿದ್ದಾರೆ.

ದಿಃ 13-08-2004 ಕ್ಕೆ ನಾನು ಪದನ್ನೋತಿ ಹೊಂದಿ ಡಿಡಿಪಿಐ ಕಚೇರಿಗೆ ವರ್ಗಾವಣೆಯಾಗಿದೆ. ನಾನು ನಿವೃತ್ತಿ ಹೊಂದುವವರೆಗೆ ನನ್ನ ಆರೋಗ್ಯದಲ್ಲಿ ಅಂತಹ ಮುಖ್ಯ ವ್ಯತ್ಯಾಸ ಆಗಿರಲಿಲ್ಲ. 1994 ರಲ್ಲಿ ಅಪಘಾತದಲ್ಲಿ ನನ್ನ ಬಲಗೈ ಮೂಳೆ ಮುರಿದಿದೆ. ನಾನು 1994 ರಿಂದ ಅಂಗವಿಕಲ ಎಂದು ತೋರಿಸಿಕೊಂಡಿದ್ದೇನೆ ಎಂದರೆ ಸರಿ. ನನ್ನ ಮಗಳು 3 ವರ್ಷ ಕಾರ್ಮೆಲ್ ಕಾಲೇಜಿಗೆ ಹೋದಳು. ನನ್ನ ಮಗಳನ್ನು ಬಿಎಸ್‌ಸಿಗೆ ಮೌಂಟ್‌ಕಾರ್ಮೆಲ್‌ಗೆ ಸೇರಿಸಿದಾಗ ನಾನು ವಿ.ನಾಗೇನಹಳ್ಳಿಗೆ ಕುಟುಂಬ ಸಮೇತ ಶಿಪ್ಟ್ ಆದೆ. ಆಗ ನನ್ನ ಬೇಸಿಕ್ 5500/- ರೂ ಎಂದರೆ ಸರಿಯಲ್ಲ. ಇನ್ನೂ ಹೆಚ್ಚು ಇತ್ತು. ನಾನು ನನ್ನ ಮಗಳು ಒಟ್ಟಿಗೆ ಬೆಳಿಗ್ಗೆ 7.45 ರಿಂದ 8.00 ಗಂಟೆಗೆ ಮನೆ ಬಿಡುತ್ತಿದ್ದೆವು. ಆಕೆಯ ಕಾಲೇಜು 3.45 ರಿಂದ 4.00 ಗಂಟೆಗೆ ಕೆಲವೊಮ್ಮೆ 5.30 ರವರೆಗೆ ಇರುತ್ತಿತ್ತು. ವಾರಕ್ಕೆ 5.30 ರವರೆಗೆ ಎಷ್ಟು ದಿನ ತರಗತಿಗಳು ಇರುತ್ತಿದ್ದವು ಎಂದು ಹೇಳಲಾಗುವುದಿಲ್ಲ. ನಮ್ಮ ಕಚೇರಿ ಅವದಿ ಬೆಳಿಗ್ಗೆ 10.30 ರಿಂದ 5.30. ಕೆಲವೊಮ್ಮೆ ನನ್ನ ಮಗಳು ಸಾಮಾನ್ಯವಾಗಿ ಆಕೆಯ ಸ್ನೇಹಿತೆಯರ ಜೊತೆ ಕಾಲೇಜಿಗೆ ಹೋಗಿ ಬರುತ್ತಿದ್ದಳು ಎಂದರೆ ಸರಿ.

ನಾನು ನನ್ನ ಮಗಳ ವಿದ್ಯಾಭ್ಯಾಸದ ಮತ್ತು ನಡತೆಯ ಬಗ್ಗೆ ಗಮನ ಇಡುತ್ತಿದ್ದೆ. ಆಕೆಯ ಪ್ರೋಗ್ರೆಸ್ ಕಾರ್ಡ್‌ನ್ನು ತರುತ್ತಿದ್ದಳು. ಆಕೆಯ ವಿದ್ಯಾಭ್ಯಾಸದ ಬಗ್ಗೆ ಯಾವುದೇ ರೀತಿಯ ರಿಮಾರ್ಕ್ ಇರಲಿಲ್ಲ. ನಾನು ನನ್ನ ಮಗಳನ್ನು ಮೌಂಟ್‌ಕಾರ್ಮಲ್ ಕಾಲೇಜಿಗೆ ಆಕೆಯ ಜ್ಞಾನ ಹೆಚ್ಚಿಸಲು ಸೇರಿಸಿದೆ, ಆಕೆ ಪಾಸ್ ಆಗುತ್ತಾಳೋ ಫೈಲ್ ಆಗುತ್ತಾಳೋ ಅವಶ್ಯಕತೆ ಇರಲಿಲ್ಲ. ಬಿಎಸ್‌ಸಿ ನಲ್ಲಿ 6 ಸೆಮಿಸ್ಟಾರ್ ಇತ್ತು ಎಂದರೆ ಸರಿ. ಆಕೆ ಒಂದು ಸೆಮಿಸ್ಟಾರ್ ಕೂಡಾ ಪಾಸ್ ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಎಷ್ಟು ಸೆಮಿಸ್ಟಾರ್ ಅಂಕಪಟ್ಟಿಯನ್ನು ನೋಡಿದ್ದೇನೆಂದು ನೆನಪಿಲ್ಲ. ನನ್ನ ಮಗಳು ಶ್ರೀನಿವಾಸಪುರದಲ್ಲಿ ಪಿಯುಸಿಗೆ ಹೋಗುತ್ತಿದ್ದಾಗ ಆಕೆಯ ದೇಹದಲ್ಲಿ ವ್ಯತ್ಯಾಸ ಆಗಿತ್ತು ಎಂದರೆ ಸರಿಯಲ್ಲ. ಆಕೆ ಕಾರಣಾಂತರಗಳಿಂದ ವಿಷ ತೆಗೆದುಕೊಂಡಿದ್ದು, ನಾನು ಚಿಕಿತ್ಸೆ ಕೊಡಿಸಿದ್ದೆ ಎಂದರೆ ಸರಿಯಲ್ಲ. ಆ ಅವಮಾನ ತಡೆಯಲಾರದೆ ನಾವು 2ನೆಯ ವರ್ಷಕ್ಕೆ ದೊಡ್ಡ ಬಳ್ಳಾಪುರಕ್ಕೆ ಕುಟುಂಬ ಸಮೇತ ಹೋದವು ಎಂದರೆ ಸರಿಯಲ್ಲ.

ದಿ: 13-08-2004 ರಲ್ಲಿ ನನ್ನ ಮಗಳು ಯಾವ ಕೋರ್ಸ್ ಮತ್ತು ಎಲ್ಲಿ ಓದುತ್ತಿದ್ದಳು ಎಂದು ನೆನಪಿಲ್ಲ. ನನ್ನ ಮಗಳು ಬಿಎಸ್‌ಸಿ ಫೈಲ್ ಆಗಿದ್ದಾಳೆ ಎಂದು 2010 ರಲ್ಲಿ ಗೊತ್ತಿತ್ತು. 2010 ರಲ್ಲಿ ನನ್ನ ಮಗಳಿಗೆ 23 ವರ್ಷದಲ್ಲಿ ನಡೆಯುತ್ತಿತ್ತು. ನನಗೆ ಆಗ ನನ್ನ ಮಗಳ ವಿದ್ಯಾಭ್ಯಾಸ ಮುಂದುವರೆಸಬೇಕೆಂದು ಅಂದುಕೊಂಡಿರಲಿಲ್ಲ, ಆದರೆ ಕೆಲಸಕ್ಕೆ ಸೇರಿಸೋಣ ಎಂದು ಅನಿಸುತ್ತಿತ್ತು. ನನ್ನ ಮಗಳಿಗೆ ಓದುವುದು ಬೇಡ ಕೆಲಸಕ್ಕೆ ಸೇರಿಸಬೇಕೆಂದು ನನ್ನ ಮನಸ್ಸಿನಲ್ಲಿ ತುಂಬಾ ಆಸೆ ಇತ್ತು. ನನ್ನ ಮಗಳಿಗೆ ಕೆಲಸಕ್ಕಾಗಿ ಅರ್ಜಿ ಹಾಕಿಸಿರಲಿಲ್ಲ ಆದರೆ ಪ್ರಯತ್ನ ಪಡುತ್ತಿದ್ದೆ. ನಮ್ಮ ಇಲಾಖೆಗೆ ಸರ್ಕಾರಿ ಕೆಲಸಕ್ಕೆ ನಾವು ನೇರವಾಗಿ ತೆಗೆದುಕೊಳ್ಳಲು ಬರುವುದಿಲ್ಲ. ನಾರ್ತ್ ಡಿಡಿಪಿಐ ಕಚೇರಿ ವ್ಯಾಪ್ತಿಯಲ್ಲಿ ಅನುದಾನಿತ ಶಾಲೆಗಳು ಇತ್ತು.

ಬೆಂಗಳೂರು ನಾರ್ತ್ ವ್ಯಾಪ್ತಿಯಲ್ಲಿ ಹೈಸ್ಕೂಲ್ ಮತ್ತು ಪಿಯುಸಿ ಮತ್ತು ಪ್ರಥಮ ದರ್ಜೆಯ ಕಾಲೇಜುಗಳು ಅನುದಾನಿತ ಹಾಗೂ ಅನುದಾನಿತ ಅಲ್ಲದವೂ ಸಹ ಇದ್ದವು ಎಂದರೆ ಸರಿ. 2008-2009 ರಲ್ಲಿ ಆಕೆ ಬಿಎಸ್‌ಸಿ ಕೋರ್ಸ್ ಮುಗಿಸಿದ್ದಳು. ಆಕೆಯ ಕೋರ್ಸ್ ಮುಗಿಯುವ ಮೊದಲೂ ಸಹ

ಆಕೆಯ ಕೆಲಸಕ್ಕಾಗಿ ಪ್ರಯತ್ನಪಡುತ್ತಿದ್ದೆ. ನಾನು ಯಾವುದೇ ಶಾಲೆಗೆ ನನ್ನ ಮಗಳಿಂದ ಅರ್ಜಿ ಹಾಕಿಸಿರಲಿಲ್ಲ. ಆಕೆ ಮೊದಲನೆಯ ವರ್ಷದ ಪಿಯುಸಿಯಲ್ಲಿ ದೈಹಿಕವಾಗಿ ಹಾಗೂ ಮಾನಸಿಕವಾಗಿ ತುಂಬಾ ನೊಂದುಕೊಂಡಿದ್ದಳು ಎಂದರೆ ಸರಿಯಲ್ಲ. ನಾನು ಆಕೆಯನ್ನು ದೊಡ್ಡಬಳ್ಳಾಪುರದ ನಂತರ ಮೌಂಟ್‌ಕಾರ್ಮೆಲ್‌ಗೆ ಸೇರಿಸಿದ್ದರಿಂದ ಆಕೆ ಮಾನಸಿಕವಾಗಿ ಇನ್ನೂ ನೊಂದುಕೊಂಡಿದ್ದಳು ಎಂದರೆ ಸರಿಯಲ್ಲ. ಆ ರೀತಿ ಮಾನಸಿಕವಾಗಿ ನೊಂದಿದ್ದರಿಂದ ಮದುವೆ ಮಾಡಿದರೆ ಮುಂದೆ ಸರಿ ಹೋಗುತ್ತಾಳೆ ಎಂದು ನಾನು ಅಂದುಕೊಂಡಿದ್ದೆ ಎಂದರೆ ಸರಿಯಲ್ಲ. ಆಕೆ ಕಾಲೇಜು ಮುಗಿಸಿದ ಸುಮಾರು 1 ವರೆ ವರ್ಷಕ್ಕೆ ಮದುವೆ ಮಾಡಿದೆವು.

ಆಕೆ ಮದುವೆಯಾಗಬೇಕೆಂದು ನಮ್ಮ ಮುಂದೆ ಹೇಳಿರಲಿಲ್ಲ. ನನ್ನ ಮಗಳಿಗೆ ಮದುವೆ ಇಷ್ಟ ಇರಲಿಲ್ಲ ಮತ್ತು ನನ್ನ ಜವಾಬ್ದಾರಿಯಿಂದ ಕಳಚಿಕೊಳ್ಳಲು ಆಕೆಗೆ ಮದುವೆ ಮಾಡಿದೆವು ಎಂದರೆ ಸರಿಯಲ್ಲ. ನನ್ನ ಮಗನ ಮದುವೆಯನ್ನು ಕೋಲಾರದ ಪೂಜಾ ಕಲ್ಯಾಣ ಮಂಟಪದಲ್ಲಿ 2011 ರಲ್ಲಿ ಮದುವೆ ಮಾಡಿದ್ದೆ. ನನ್ನ ಸೊಸೆ ಕೋಲಾರ ಟೌನ್‌ಗೆ ಸೇರಿದ್ದಾಳೆ. ಆಕೆಯ ತಂದೆ ಬಿಇಓ ಕಚೇರಿಯಲ್ಲಿ ಅಕೌಂಟೆಂಟ್ ಆಗಿದ್ದರು. ನನ್ನ ಮಗಳ ಮದುವೆಯನ್ನು ಸಂಪ್ರದಾಯವಾಗಿ ಮಾಡಿದೆವು. ನಮ್ಮ ಸಂಪ್ರದಾಯಜದ ಪ್ರಕಾರ ಹುಡುಗ ಹುಡುಗಿಯ ಮನಗೆ ಹೋಗಿ ಇಷ್ಟವಾದಲ್ಲಿ ತಂದೆ ತಾಯಿಗೆ ತಿಳಿಸುತ್ತಾರೆಂದರೆ ಸರಿ. ಆ ನಂತರ ತಂದೆ ತಾಯಿ ಹೋಗಿ ಹೆಣ್ಣಿನ ಮತ್ತು ಕುಟುಂಬದವರನ್ನು ನೋಡಿ ಒಪ್ಪಿಗೆಯಾದಲ್ಲಿ ನಮ್ಮ ಮನೆಗೆ ಬರಲು ಕರೆಯುತ್ತೇವೆಂದರೆ ಸರಿ. ಅವರು ನಮ್ಮ ಮನೆಗೆ ಬಂದು ಇಷ್ಟವಾದಲ್ಲಿ ಎರಡೂ ಕಡೆಯಿಂದ ಯಾವ ರೀತಿ ಮದುವೆ ಮಾಡಬೇಕೆಂದು ಮಾತನಾಡುತ್ತೇವೆಂದರೆ ಸರಿ. ಆಗ ಎರಡೂ ಕಡೆಯ ಹಿರಿಯ ಗಂಡಸು ಮಾತುಕತೆ ಮಾಡುತ್ತಾರೆಂದರೆ ಸರಿ.

ಅದೇ ರೀತಿ ನನ್ನ ಮಗನಿಗೂ ಸಹ ಹೆಣ್ಣಿನ ಕಡೆಯವರು ಸಂಪ್ರದಾಯವಾಗಿ ಒಡವೆ ವಸ್ತುಗಳನ್ನು ಕೊಟ್ಟು ಮದುವೆ ಮಾಡಿರುತ್ತಾರೆಂದರೆ ಸರಿ. ಸಂಪ್ರದಾಯವಾಗಿ ಹೆಣ್ಣಿಗೆ 4 ರೇಷ್ಮೆ ಸೀರೆಗಳು ಮತ್ತು ಗಂಡಿಗೆ ಬೇಕಾದ ಬಟ್ಟೆಗಳನ್ನು ಕೊಡಿಸುತ್ತೇವೆಂದರೆ ಸರಿ. ನನ್ನ ಮಗ ಮತ್ತು ಸೊಸೆ

ಮದುವೆಯಾದಾಗಿನಿಂದ ನಮ್ಮ ಜೊತೆ ಇದ್ದಾರೆ. 2010 ರಲ್ಲಿ ನನ್ನ ಮಗಳ ಮದುವೆಯಾದಾಗ ನನ್ನ ಮಗ ಹೈದರಾಬಾದ್‌ನಲ್ಲಿ ಮೈಕ್ಯಾನಿಕಲ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ, ಅದಕ್ಕೂ ಮೊದಲು ಹೊಸಕೋಟೆಯ ಪಿಲ್ಲಗುಂಪೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ಮಗ ಶಿವಶಂಕರ್ ಬಿಇ ಪಾಸಾಗಿಲ್ಲ ಎಂದರೆ ಸರಿಯಲ್ಲ. ನನ್ನ ಮಗನಿಗೆ ಹೆಣ್ಣು ನೋಡಲು ಹೋದಾಗ ಆತ ಪಿಲ್ಲಗುಂಪೆಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ನನ್ನ ಮಗನ ಮದುವೆ ಸಮಯಕ್ಕೆ ಆತ ಹೈದರಾಬಾದ್‌ನಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ಮದುವೆಯಾದ ನತರ ಪಿಲ್ಲಗುಂಪೆಗೆ ವಾಪಸ್ಸು ಬಂದರು. ನನ್ನ ಮಗ ಮತ್ತು ಸೊಸೆ ಹೈದರಾಬಾದ್‌ನಲ್ಲಿ ಸಂಸಾರ ಮಾಡಲಿಲ್ಲ ಎಂದರೆ ಸರಿ. ಈಗ ಅಪ್ಪಿಗೆರೆಯಲ್ಲಿ ನಮ್ಮದೇ ಸ್ವಂತ ಬೀರೇಶ್ವರ ಎಂಟರ್‌ಪ್ರೈಸಸ್ ಕಾರ್ಖಾನೆ ಇದೆ. ಅದನ್ನು ನಮ್ಮ ಮಗ ನೋಡಿಕೊಳ್ಳುತ್ತಾನೆ.

ದಿಃ 28-02-2010 ರಲ್ಲಿ ನನಗೆ ಕಂಪಲ್‌ಸರಿ ರಿಟೈರ್‌ಮೆಂಟ್ ಆಯಿತು ಎಂದರೆ ಸರಿಯಲ್ಲ. ನಾನು ಡಿಡಿಪಿಐ ಕಚೇರಿಗೆ ಕೆಲಸಕ್ಕೆ ಹೋಗುತ್ತಿದ್ದಾಗ ಪ್ರತಿದಿನ ದಿನಚರಿಯಲ್ಲಿ ಸಹಿ ಮಾಡುತ್ತಿದ್ದೆ. ನನ್ನ ಮಗನ ಮದುವೆಯಾಗುವವರೆಗೆ ನನ್ನ ಮಗಳು ಮತ್ತು ಅಳಿಯ ನಮ್ಮ ಮನೆಯಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ. ವಿ.ನಾಗೇನಹಳ್ಳಿಯ ಮನೆಯನ್ನು ಲೀಸ್‌ಗೆ ಪಡೆದಿದ್ದೆ. ನನ್ನ ಮಗಳಿಗೆ ನಾನು ಮದುವೆಯಾಗುವವರೆಗೆ ಮನೆ ಕೆಲಸ ಮಾಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು ಮನೆಯ ಕಸ ಗುಡಿಸುವುದು, ಅಡುಗೆ ಮಾಡುವುದು ಎಲ್ಲಾ ಸ್ವಂತ ಮಾಡುತ್ತಿದ್ದಳು. ಸಂಪ್ರದಾಯವಾಗಿ ಮೊದಲನೆಯ ಬಾರಿ ಮೊದಲು ಗರ್ಭ ಧರಿಸಿದರೆ ತವರು ಮನೆಯವರೇ ಆಕೆಯನ್ನು ನೋಡಿಕೊಳ್ಳಬೇಕಿತ್ತು ಎಂದರೆ ಸರಿ. ನಮ್ಮ ಮನಗೆ ಹತ್ತಿರವಾಗಿ ಲಕ್ಷ್ಮೀನರಸಿಂಗ್‌ಹೋಂ ಇತ್ತು ಎಂದರೆ ಸರಿ.

ನನ್ನ ಮಗಳು ಗರ್ಭಿಣಿಯಾದಾಗಿನಿಂದ ಅಂದರೆ ದಿಃ 06-01-2011 ರಿಂದ ಆಕೆಗೆ ಹೆರಿಗೆಯಾಗುವವರೆಗೆ ಅದೇ ಆಸ್ಪತ್ರೆಗೆಯಲ್ಲಿ ತೋರಿಸುತ್ತಿದ್ದೆವು ಎಂದರೆ ಸರಿ. ಆಕೆ ಹೆರಿಗೆಯಾದ ನಂತರ 10 ತಿಂಗಳು ನಮ್ಮ ಮನೆಯಲ್ಲಿ ಇದ್ದಳು ಎಂದರೆ ಸರಿ. ಆ ರೀತಿ ನಮ್ಮ ಮಗಳು ನಮ್ಮ ಮನೆಯಲ್ಲಿದ್ದಾಗ ನಮ್ಮ ಅಳಿಯ ಬಂದು ಹೋಗುತ್ತಿದ್ದ.

ನನ್ನ ಅಳಿಯ ಕೆಪಿಎಸ್‌ಸಿ ಬರೆದು ಚಿತ್ರದುರ್ಗದ ಹೊಸದುರ್ಗದಲ್ಲಿ ಮೊದಲು ನೇಮಕವಾಗಿ ನಂತರ ಸೂಲಿಬೆಲೆ ಪ್ರಥಮ ದರ್ಜೆಯ ಕಾಲೇಜಿಗೆ ವರ್ಗಾವಣೆ ಹೊಂದಿದ್ದರು ಎಂದರೆ ಸರಿ. ಆತ ಎಂಲಿಬ್ ಓದಿದ್ದಾರೆಂದರೆ ಸರಿ. ನನ್ನ ಮಗಳಿಗೆ ಹೆರಿಗೆಯಾದಾಗ ಸಹ ನನ್ನ ಅಳಿಯ ಸೂಲಿಬೆಲೆಯಲ್ಲಿ ಕೆಲಸ ಮಾಡುತ್ತಿದ್ದ. ಆಗ ಆತನ ಬಳಿ ಒಂದ ಮೋಟಾರು ಸೈಕಲ್ಲು ಇತ್ತು. ಆತ ನಮ್ಮ ಮನೆಗೆ ಮತ್ತು ಕಚೇರಿಗೆ ಮೋಟಾರು ಸೈಕಲ್ಲಿನಲ್ಲಿ ಓಡಾಡುತ್ತಿದ್ದ ಎಂದರೆ ಸರಿ. ನಂತರ ಆತ ಇಂಡಿಕಾ ಕಾರನ್ನು ತೆಗೆದುಕೊಂಡಿದ್ದ ಎಂದರೆ ಅದು ಸ್ವತಃ ತೆಗೆದುಕೊಂಡಿದ್ದನೋ ಇಲ್ಲವೋ ಗೊತ್ತಿಲ್ಲ, ಆದರೆ ಕಾರು ಇತ್ತು. ಆತ ನನ್ನ ಮಗಳನ್ನು ಕಾರಿನಲ್ಲಿ ಓಡಾಡಿಸುತ್ತಿದ್ದ ಬಗ್ಗೆ ಗೊತ್ತಿಲ್ಲ.

ಟಾಟಾ ಇಂಡಿಕಾ ಕಾರನ್ನು ನಾನು ಖುದ್ದಾಗಿ ನೋಡಿದ್ದೇನೆ. ನನ್ನ ಮಗಳಿಗೆ ಹೆರಿಗೆಯಾದ ಸಂದರ್ಭದಲ್ಲಿ ಆ ಕಾರನ್ನು ನಾನು ನೋಡಿರಲಿಲ್ಲ. ಪೊಲೀಸರು ಆ ಕಾರನ್ನು ನನಗೆ ತೋರಿಸಿದ್ದಾರೆ. ಆ ಕಾರಿನ ದಾಖಲಾತಿಯನ್ನು ನೋಡಿಲ್ಲ, ಆ ಕಾರಿನ ದಾಖಲೆಗಳು 1ನೇ ಆರೋಪಿಯ ಹೆಸರಿನಲ್ಲಿದೆ. ನಾನು ಆ ದಾಖಲಾತಿಗಳನ್ನು ಪರಿಶೀಲನೆ ಮಾಡಲಿಲ್ಲ, ಕಾರನ್ನು ಜಪ್ತಿ ಮಾಡಿದ್ದ ದಿನ ಆರ್‌ಸಿ ಪುಸ್ತಕವನ್ನು ಜಪ್ತಿ ಮಾಡಿದರು. ನಾನು ಆಗಲೂ ಆ ಕಾರಿನ ದಾಖಲೆಗಳನ್ನು ಪರಿಶೀಲನೆ ಮಾಡಿಲ್ಲ. ಆ ಕಾರಿನಲ್ಲಿ ಕೋಲಾರದ ಬಸ್‌ಸ್ಟಾಪ್‌ನಿಂದ ಕೀಲುಕೋಟೆಯಲ್ಲಿ ಮನೆ ಮಾಡಿಕೊಡಲು ಅಲ್ಲಿಯವರೆಗೆ ಹೋಗಿದ್ದೇನೆ. ಕೆಎಸ್‌ಆರ್‌ಟಿಸಿ ಬಸ್‌ಸ್ಟಾಂಡ್‌ನಿಂದ ಸುಮಾರು 1 ವರೆ ಕಿಮೀ ದೂರ ಆಗುತ್ತದೆ. ಅದಕ್ಕೂ ಮೊದಲು ನಾನು ಆ ಕಾರಿನಲ್ಲಿ ಪ್ರಯಾಣಿಸಿಲ್ಲ. ಕೀಲುಕೋಟೆಯಲ್ಲಿ ಮನೆ ಮಾಡಿದಾಗ 1ನೇ ಆರೋಪಿಗೆ ಮೋಟಾರು ಸೈಕಲ್ಲು ಮತ್ತು ಕಾರು ಇತ್ತು.

(ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿರುತ್ತಾರೆ. ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

(ಬಿಎಸ್. ರೇಖ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.